ಶ್ರೀ ಜಿ. ಶಿವಪ್ಪನವರು.—ಇಲ್ಲಗೇ ಮೈಸೂರಿನಲ್ಲಿರುವುದನ್ನೂ ಬೆಂಗಳೂರಿನಲ್ಲಿರುವುದನ್ನೂ ತರಿಸಿಟ್ಟು ಸ್ಥಳದ ಜನರು ಬಹುಮಟ್ಟಿಗೆ ಅಭಿರುಚಿಯಿಟ್ಟು ಇವುಗಳನ್ನು ತಿಳಿದುಕೊಳ್ಳಬೇಕೆಂದು ಇಷ್ಟಪಡುತ್ತಿರುವುದರಿಂದ, ಇಲ್ಲೇ ಅವುಗಳನ್ನಿಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾರ್ವಜನಿಕರ ನೋಡಕ್ಕಾಗಿ (public exhibition) ಎಷ್ಟು ಆವಶ್ಯಕವೋ ಅಷ್ಟು ಇಲ್ಲಿಟ್ಟು, studyಗೆ ಬೇಕಾದುವುಗಳನ್ನು ಬೇರೆ ಕಡೆ ಇಡುವುದು ಸೂಕ್ತವೆಂದು ಯೋಚನೆಮಾಡಿದೆ.

ಶ್ರೀ ಜಿ. ಶಿವಪ್ಪನವರು.—ಒಟ್ಟು Antiquity ವಸ್ತುಗಳು 8,000 ಇರುವಲ್ಲಿ, ಕೇವಲ 500 ಮಾತ್ರ ಇಲ್ಲಿರುವುದು ಸರಿಯೇ?

ಅಧ್ಯಕ್ಷರು.—ಅಭಿಪ್ರಾಯ ಹೇಳಬೇಡಿ.

ಶ್ರೀ ಜಿ. ಶಿವಪ್ಪನವರು.—ಕೊನೆಯ ಪಕ್ಷ 4,000 ಪ್ರಾಚೀನ ವಸ್ತುಗಳನ್ನಾದರೂ ತರಿಸಿದುವ ಏರ್ಪಾಡು ಮಾಡುತ್ತೀರಾ?

**Sri A. G. RAMACHANDRA RAO.**—Representative antiquities will be kept there.

ಶ್ರೀ ಜಿ. ಶಿವಪ್ಪನವರು.—ಡೆಲ್ಲಯಿಂದ ತರುವುದನ್ನು ಚಿತ್ರದುರ್ಗ ಮ್ಯೂಸಿಯಮ್ಮಿನಲ್ಲಿಡುವುದಕ್ಕೆ ಏನು ಕಾರ್ಯಕ್ರಮ ಕ್ಕೈಕೊಂಡಿದೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಡೆಲ್ಲಯಿಂದ ಬಂದ ಮೇರೆ ಇಲ್ಲಿ ಎಷ್ಟು ಇಟ್ಟುಕೊಳ್ಳಬೇಕು, ಬೆಂಗಳೂರಿಗೆ ಎಷ್ಟು ಕಳುಹಿಸಬೇಕು ಎಂಬುದನ್ನು ಯೋಚನೆ ಮಾಡಿ ನೋಡುತ್ತೇವೆ.

ಶ್ರೀ ಜಿ. ಶಿವಪ್ಪನವರು.—ಅಲ್ಲಿ ಮ್ಯೂಸಿಯಂ ಸ್ಥಾಪನೆಯಾದ ಮೇಲೆ ಅಲ್ಲಿಂದೇನಾದರೂ ರಿಪೋರ್ಟ್ ತರಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಒಂದು ರಿಪೋರ್ಟ್ ಏನೋ ಬಂದಂತೆ ಕಾಣುತ್ತದೆ.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು).—ಚಿತ್ರದುರ್ಗದ ಮಗ್ಗುಲಲ್ಲಿರುವ ಚಂದ್ರವಳ್ಳಿಯಲ್ಲಿ ನಡೆಸಿದ excavation ನಿಂದ ಎಷ್ಟು ವಸ್ತುಗಳು ಸಿಕ್ಕಿವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ excavation ನಡೆಯುತ್ತಿದೆ. ಅಲ್ಲಿ 29-31ನೆಯ ಸಾಲುಗಳಲ್ಲಿ ಅನೇಕ ವಸ್ತುಗಳು ಸಿಕ್ಕಿವೆ.

ಶ್ರೀ ಎ. ಭೀಮಪ್ಪನಾಯಕರು.—ಅಲ್ಲಿ ಸಿಕ್ಕಿರತಕ್ಕ ವಿಶೇಷ ವಸ್ತುಗಳನ್ನು ಚಿತ್ರದುರ್ಗದಲ್ಲೇ ಇಡುವುದು ಸೂಕ್ತವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದಕ್ಕಾಗಿಯೇ ಕೆಲವನ್ನು ಅಲ್ಲಿಟ್ಟಿರುವುದು.

ಶ್ರೀ ಎ. ಭೀಮಪ್ಪನಾಯಕರು.—ಈಗ ಅಲ್ಲಿರುವ ಮ್ಯೂಸಿಯಂನಲ್ಲಿ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಿಗೆ ಸಂಬಂಧಪಟ್ಟ ವಸ್ತುಗಳೇನಾದರೂ ಇಲ್ಲದೆ ಇದ್ದು ಬೆಂಗಳೂರು ಅಥವಾ ಮೈಸೂರು ಮ್ಯೂಸಿಯಂನಲ್ಲಿದ್ದರೆ ಅವುಗಳನ್ನು ಈ ಮ್ಯೂಸಿಯಂಗೆ, ಅಲ್ಲಿನ ಜನಗಳು ಅಲ್ಲಿನ ಚಾರಿತ್ರಕ ವಿಷಯಗಳನ್ನು ಕೂಲಂಕಷವಾಗಿ ತಿಳಿಯುವವರೆಗೆ, ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಯೋಚಿಸರಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಅಲ್ಲಿ ಕೆಲಸಮಾಡುತ್ತಿರುವ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ವಿಷಯದಲ್ಲಿ ಚೆನ್ನಾಗಿ ಪರಿಶ್ರಮ ಹೊಂದಿದವರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಅನೊರೆರಿ ಕ್ಯೂರೇಟರ್ ಆಗಿ ನೇಮಿಸರಾಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಅವರಿಗೆ ಅನೊರೇರಿಯಮನ್ನು ತಿಂಗಳಿಗೆ 100 ರೂಪಾಯಿಗಳನ್ನಾದರೂ ಕೊಡಬೇಕೆಂದು ಹೇಳಿ ಪ್ರಾರಂಭ ಮಾಡುವಾಗಲೇ ಮಿಕ್ಕ ವಿಷಯಗಳ ಜೊತೆಗೆ ಈ proposal ಕೂಡ ಬಂದಿರಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅನೊರೇರಿಯಂ ಕೊಡಬೇಕೆಂದು ಆರೋಚನೆ ಮಾಡಿದೆ. ಎಷ್ಟು ಕೊಡಬೇಕೆಂಬುದನ್ನು ನಿಗದಿಮಾಡಿಕೊಡುತ್ತೇವೆ.

**Sri A. BHEEMAPPA NAIK.**—Thank you.

---

**Mr. SPEAKER.**—We will take up the questions relating to the Chief Minister.

**Sri K. HANUMANTHAIYA** (Chief Minister).—Yes.

---

## Suspending the awarding of Public Service Medals by His Highness.

*Q.*—97. **Sri G. SIVAPPA** (Holalkere).—

Will the Government be pleased to state:—

(*a*) why they have stopped the conferring of Public Service Medals by His Highness to those who have rendered valuable services to the country in the form of donation and Public Service, etc.;

(*b*) whether it has come to their notice that the Article 18 of the Constitution of India is not a bar on conferring Public Service Medals;

(*c*) whether they will consider the matter?

*A.*—**Sri K. HANUMANTHAIYA** (Chief Minister).—

(*a*) Pending the outcome of the correspondence with the Government of India on the subject, the award of medals has been suspended.

(*b*) and (*c*) Please see reply to clause (*a*).

ಶ್ರೀ ಜಿ. ಶಿವಪ್ಪನವರು.—ಪತ್ರವ್ಯವಹಾರ ನಡೆಸಿರುವುದೇನೆಂಬುದನ್ನು ದಯವಿಟ್ಟು ವಿವರಪಡಿಸುತ್ತೀರಾ?

ಶ್ರೀ ಕೆ. ಹನುಮಂತಯ್ಯನವರು.—ಈ ಪೆಡರ್ ಗಳನ್ನು ಕೊಡುವುದು ಸಾಧ್ಯವೇ ಮತ್ತು ಸೂಕ್ತವೇ ಎಂಬ ವಿಷಯಗಳ ಬಗ್ಗೆ ಪತ್ರವ್ಯವಹಾರ ನಡೆಯುತ್ತಿದೆ.

ಶ್ರೀ ಜಿ. ಶಿವಪ್ಪನವರು.—ಕಾಂಗ್ರೆಸ್ ಸರ್ಕಾರ ಬಂದ ಮೇಲೆಯೂ ಈ ರೀತಿ ಅನೇಕಾವೃತ್ತಿ ಪೆಡಲ್ ಗಳನ್ನು ಕೊಟ್ಟಿಲ್ಲವೇ ?

ಶ್ರೀ ಕೆ. ಹನುಮಂತಯ್ಯನವರು.—ನನಗೇನೂ ಕೊಟ್ಟಿಲ್ಲ. (ನಗು).

ಶ್ರೀ ಜಿ. ಶಿವಪ್ಪನವರು.—ಇದಕ್ಕೆ ರಾಜ್ಯಾಂಗದ 18ರ ಪ್ರಕಾರ ತೊಂದರೆ ಬರುವುದಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸಿ ಪತ್ರವ್ಯವಹಾರ ಮಾಡುತ್ತಿದ್ದೀರಾ?

ಶ್ರೀ ಕೆ. ಹನುಮಂತಯ್ಯನವರು.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಜಿ. ಶಿವಪ್ಪನವರು.—ಈಗ ಪತ್ರವ್ಯವಹಾರ ನಡೆಸುತ್ತಿರುವುದು ಯಾವ ಕಾರಣದ ಮೇಲೆ ?

**Sri K. HANUMANTHAIYA.**—I did not understand the Hon'ble Member clearly.

**Mr. SPEAKER.**—There is the answer in (a).

---

## Persons and Associations to whom Loans were granted during 1947-52.

Q. 208.—**Sri. S.GOPALA GOWDA** (Sagar-Hosanagar).—

Will the Government be pleased to state:—

whether they will furnish the list of persons and associations districtwise who have been granted loans by them during the years 1947—52, and the amount of loan which is still outstanding against each grantee and to what purpose?

A.—**Sri. K. HANUMANTHAIYA** (Chief Minister).—

Information is being collected.

ಶ್ರೀ ಎಸ್. ಗೋಪಾಲಗೌಡರು.—ಈ ವಿವರ ಸಂಗ್ರಹಣೆಗೆ ಎಷ್ಟು ಕಾಲ ಹಿಡಿಯಬಹುದು ?

ಶ್ರೀ ಕೆ. ಹನುಮಂತಯ್ಯನವರು.—ಅದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ. ನಾನು ಮತ್ತೊಂದು ಪ್ರಶ್ನೆಯ ಸಂದರ್ಭದಲ್ಲಿ ಉತ್ತರ ಕೊಟ್ಟ ಹಾಗೆ, ನನ್ನ ಉದ್ದೇಶ ಮಾದರೂ ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಕೊಡಕೂಡದು ಅಥವಾ ತಡಮಾಡಬೇಕು ಎಂಬುದಲ್ಲ. ಅಲ್ಲದೆ, ಯಾರ್ಯಾರ ಮೇಲೆ ಸಾಲದ ಬಾಕಿಯಿದೆಯೋ, ಆ ಸಾಲದ ಬಾಕಿಗಳನ್ನೆಲ್ಲಾ ಅವುಗಳ ಷರತ್ತುಗಳ್ಗೇನಿದೆ ಆ ಷರತ್ತುಗಳ ಪ್ರಕಾರ ವಸೂಲು ಮಾಡಬೇಕೆಂದು ಈಗಾಗಲೇ ಹುಕುಂ ಜಾರಿ ಮಾಡಿದೆ.

ಶ್ರೀ ಎಸ್. ಗೋಪಾಲಗೌಡರು.—ಈ ಅಧಿವೇಶನ ಮುಗಿಯುವುದರೊಳಗೇ ಆ ವಿವರಗಳನ್ನು ಸಂಗ್ರಹಣೆ ಮಾಡಿಕೊಡುತ್ತೀರಾ ?

ಶ್ರೀ ಕೆ. ಹನುಮಂತಯ್ಯನವರು.—ಪ್ರಯತ್ನಮಾಡುತ್ತೇವೆ.

---

## D. D. T. Spraying in Belur, Saklespur and Alur Taluks.

Q.—71. **Sri B. N. BORANNA GOWDA** (Belur).—

Will the Government to pleased to state:—

(*a*) whether it is a fact that Belur, Saklespur and Alur Taluks are included under health units;

(*b*) in how many villages of these taluks D.D.T. is not being sprayed;

(*c*) in how many villages of Yeslur Hobli in Saklespur Taluk D.D.T. is being sprayed;

(*d*) the expenditure required to spray D.D.T. in places where there are no hospitals in these three taluks?

A.—**Sri T. CHANNIAH** (Minister for Public Health and Local Self-Government.—

(*a*) No, except for some parts.

(*b*) 301.

(*c*) 23.

(*d*) Twelve more Health Units will have to be started to cover the remaining portions in these three taluks, each Health Units costing Rs. 17,973 4/5 and the total cost of the scheme will be Rs. 3,05,685 3/5.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಬೇಲೂರು, ಸಕಲೇಶಪುರ ಮತ್ತು ಆಲೂರು ಈ ಮೂರು ತಾಲ್ಲೂಕುಗಳನ್ನೂ ವಿಲೇನಾಡು ತಾಲ್ಲೂಕುಗಳೆಂದು ಗಣನೆಮಾಡಿಲ್ಲವೆ ?

ಶ್ರೀ ಟಿ. ಚೆನ್ನಯ್ಯನವರು.—ಗಣನೆಮಾಡಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಮಿಕ್ಕ ಎಲ್ಲಹಳ್ಳಿಗಳಲ್ಲಿಯೂ ಡಿ.ಡಿ.ಟಿ ಸ್ಪ್ರೇ ಮಾಡುವುದು ಸರ್ಕಾರದ ಕರ್ತವ್ಯವಲ್ಲವೆ ?

ಶ್ರೀ ಟಿ. ಚೆನ್ನಯ್ಯನವರು.—ಮಾಡಬೇಕೆಂಬುದು ಯೋಚನೆಯಲ್ಲಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹೀಗೆ ಎಷ್ಟು ಹಳ್ಳಿಗಳಲ್ಲಿ ಸ್ಪ್ರೇ ಮಾಡಬೇಕೆಂದು ಮಾಡಿದ್ದೀರಿ?

ಶ್ರೀ ಟಿ. ಚೆನ್ನಯ್ಯನವರು.—ನೋಟೀಸು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಇಲ್ಲಿ ಕೊಟ್ಟಿರುವ ಉತ್ತರದಲ್ಲಿ 301 ಹಳ್ಳಿಗಳಲ್ಲಿ ಮಾಡುತ್ತಿಲ್ಲವೆಂದು ತಿಳಿಸಿದೆ. ಇದು ಸರಿಯೆಂದು ಪರಿಗಣಿಸುತ್ತೀರಾ ?

ಶ್ರೀ ಟಿ. ಚೆನ್ನಯ್ಯನವರು.—ಅದು ಅಭಿಪ್ರಾಯದ ಮಾತು.